ಒಂದಾಣೆ ಮಾಲೆ 229

ಮಹಮ್ಮದ ಪೈಗಂಬರರು

(ಸಂಕ್ಷಿಪ್ತ ಜೀವನ ಚರಿತ್ರ)

*

ಲೇಖಕರು:
ಶ್ರೀ। ಕೆ. ಆತ್ಮಾರಾಮ ಶಾಸ್ತ್ರಿ,
ಪುತ್ತೂರು.

*

1959

ಬೆಲೆ: ಒಂದಾಣೆ.

ಒಂದಾಣೆ ಮಾಲೆ — ಮಂಗಳೂರು.

ಮುನ್ನುಡಿ

ಪ್ರವಾದಿ ಮುಹಮ್ಮದ ಪೈಗಂಬರರು ಲೋಕನಾಯಕರಲ್ಲೊಬ್ಬರಾಗಿ ಜಗತ್ತಿನ ಎಲ್ಲ ದೇಶಗಳ ಜನರಿಂದ ಗೌರವಿಸಲ್ಪಟ್ಟಿರುವರು. ಮುಹಮ್ಮದ ಪೈಗಂಬರರು ಉಪದೇಶಿಸಿದ ತತ್ತ್ವಗಳು ಜಗತ್ತಿನ ಕೋಟ್ಯಾನುಕೋಟಿ ಜನರಿಂದ ಮನನಮಾಡಲ್ಪಡುತ್ತಿವೆ. ಜಗತ್ತಿನ ಅಮರಸಾಹಿತ್ಯದಲ್ಲಿ ಅವರ ವಚನಗಳು ಉಜ್ವಲವಾಗಿ ಬೆಳಗುತ್ತಿವೆ.

ಭೂಲೋಕದಲ್ಲಿ, ಮುಹಮ್ಮದೀಯರು ೩೦೦,೦೦೦,೦೦೦ಕ್ಕೂ ಹೆಚ್ಚು ಇರುವರು. ಇವರಲ್ಲಿ, ಅಧಿಕಾಂಶ ಜನರು ಪಾಕಿಸ್ಥಾನ ಮತ್ತು ಭಾರತದೊಳಗಿರುವರು. ಜಗತ್ತಿನ ಬೇರೆ ಬೇರೆ ದೇಶಗಳಲ್ಲೂ ಮುಹಮ್ಮದೀಯರಿದ್ದು, ಅವರ ಪ್ರಾರ್ಥನಾಲಯಗಳು ಜಗದಾದ್ಯಂತ ಹರಡಿವೆ.

ಪ್ರಥಮತಃ ಅರೇಬಿಯದಲ್ಲಿ ಉಗಮಸ್ಥಾನ ಕಂಡ ಇಸ್ಲಾಮ್ ಮತವು ಏಷ್ಯಾ-ಮಾಯ್ನರಿನಲ್ಲಿ ಹರಡಿ, ಅದರ ಆರಂಭದ ಎರಡು ಶತಮಾನಗಳಲ್ಲಿ ಬಹುತರ ಪ್ರಗತಿಹೊಂದಿ, ಆಫ್ರಿಕ ಮತ್ತು ಯುರೋಪಿನಲ್ಲೂ ಹರಡಿ ನೆಲೆನಿಂತಿತು. ಹನ್ನೊಂದು ಮತ್ತು ಹನ್ನೆರಡನೇ ಶತಮಾನಗಳಲ್ಲಿ ಏಷ್ಯಾ-ಮಾಯ್ನರಿನಲ್ಲಿ ಅದು ಪೂರ್ಣವಾಗಿಯೆಂಬಂತೆ ಹರಡಿದ ನಂತರ, ಭಾರತದೊಳಗೂ ಪ್ರವೇಶಿಸಿತು.

ತುರ್ಕಿಸ್ಥಾನದಲ್ಲಿ ಅದರ ಪ್ರಭಾವವು ಹೆಚ್ಚಿ, ಆ ದೇಶವು ೧೫ರಿಂದ ೧೭ನೇ ಶತಮಾನದ ವರೆಗೆ ಬಹಳ ಉಚ್ಛ್ರಾಯಸ್ಥಿತಿಗೆ ತಲಪುವ ಯತ್ನಗಳು ನಡೆದಿದ್ದುವು.

ಮುಹಮ್ಮದ ಪೈಗಂಬರರ ಜೀವನಚರಿತ್ರವನ್ನು, ಸಂಕ್ಷೇಪವಾಗಿ, ಶ್ರೀ|| ಕೆ. ಆತ್ಮಾರಾಮ ಶಾಸ್ತ್ರಿಗಳವರು ಇಲ್ಲಿ ಸಂಗ್ರಹಿಸಿಕೊಟ್ಟಿರುವರು. ಈ ಪುಸ್ತಕದ ಜತೆಯಲ್ಲಿ, ನಮ್ಮ ೨೩ನೇಯ ಪುಸ್ತಕವಾಗಿ "ಇಸ್ಲಾಮ್" ಪ್ರಕಟಿಸಲ್ಪಟ್ಟಿದೆ; ಇದರಲ್ಲಿ 'ಇಸ್ಲಾಮ್' ಎಂದರೇನೆಂಬುದರ ಸಂಕ್ಷಿಪ್ತ ವಿವರಣೆ ಕೊಡಲ್ಪಟ್ಟಿದೆ. ಮುಹಮ್ಮದ ಪೈಗಂಬರರ ತತ್ತ್ವಗಳನ್ನು ಸುಲಭಶೈಲಿಯಲ್ಲಿ ಕೊಡಲಾಗಿದೆ.

ಕುಡ್ಪಿ ವಾಸುದೇವ ಶೆಣೈ.

ಮುಹಮ್ಮದ್ ಪೈಗಂಬರರು

ಮುಹಮ್ಮದ ಪೈಗಂಬರರು ಮಕ್ಕಾದಲ್ಲಿ (ಆಗಸ್ಟ್ ತಿಂಗಳು, ೨೦ ದಿನಾಂಕ, ಇಸ್ವಿ ೫೭೦ರಲ್ಲಿ) ಜನಿಸಿದರು. ಮುಹಮ್ಮದರ ತಂದೆ ಅಬ್ದುಲ್ಲ, ಅಜ್ಜ—ಅಬ್ದುಲ್ ಮುತ್ತಾಲಿಬ. ಇವನು ಕುರಾಯಿಷ್ ವಂಶದ ಬನೀಹಾಷಿಮ್ ಬುಡಕಟ್ಟೆಗೆ ಸೇರಿದವನು. ಮುಹಮ್ಮದರ ಜನನದ ಮೊದಲೇ ತಂದೆ ತೀರಿಕೊಂಡದ್ದರಿಂದ ಅವರ ಪಾಲನೆ-ಪೋಷಣೆಯ ಭಾರವು ಅಜ್ಜ ಅಬ್ದುಲ್‌ಮುತಾಲಿಬನದಾಯಿತು.

ಕುರಾಯಿಷರ ಸಂಪ್ರದಾಯದಂತೆ ಎಂಟನೆಯ ದಿವಸದಲ್ಲಿ ಮಗುವನ್ನು ಹಲೀಮ ಎಂಬ ದಾದಿಯ ವಶಕ್ಕೆ ಕೊಟ್ಟರು. ಐದು ವರ್ಷಗಳ ತನಕ ಮಗುವನ್ನು ಸಾಕಿ, ಹಲೀಮಳು ಮರಳಿ ಅದನ್ನು ಅದರ ತಾಯಿ ಅಮೀನಳಿಗೆ ತಂದೊಪ್ಪಿಸಿದಳು. ಆದರೆ, ಮುಂದೆ ಒಂದೇ ವರ್ಷದೊಳಗೆ ಅಮೀನ ಕಾಲವಾದುದರಿಂದ ಮಗುವನ್ನು ಅಜ್ಜ ಅಬ್ದುಲ್ ಮುತಾಲಿಬನೇ ನೋಡಿಕೊಳ್ಳಬೇಕಾಯಿತು. ಅವನೂ ಮಗುವಿನ ಎಂಟನೆಯ ವರ್ಷದಲ್ಲಿ ನಿಧನವಾಗಲು, ಮಗುವಿನ ಚಿಕ್ಕಪ್ಪ ಅಬೂತಾಲಿಬ್ ಅವನ ರಕ್ಷಣೆಗೆ ಬಂದನು. ಅಬೂತಾಲಿಬ್ ವ್ಯಾಪಾರಿ. ಮುಹಮ್ಮದ್ ಬೆಳೆದ ಬಳಿಕ, ತಾನು ಚಿಕ್ಕಪ್ಪನಿಗೆ ವ್ಯಾಪಾರದಲ್ಲಿ ಸಹಾಯಕನಾದನು. ಅವನು ತನ್ನ ಹನ್ನೆರಡನೆಯ ವಯಸ್ಸಿನಲ್ಲಿ ಚಿಕ್ಕಪ್ಪನೊಂದಿಗೆ ವ್ಯಾಪಾರಿಗಳ ಒಂದು ಕಾರವಾನಿನಲ್ಲಿ ಸೇರಿಕೊಂಡು ಸಿರಿಯಾಕ್ಕೆ ಹೋದನು. ಇದರಿಂದ ಅವನ ಪ್ರಪಂಚಾನುಭವವು ಸಾಕಷ್ಟು ಬೆಳೆಯುವಂತಾಯಿತು. ಮುಂದೆ ಚಿಕ್ಕಪ್ಪನ ವ್ಯಾಪಾರವು ಇಳಿಮುಖವಾಗಲು, ಮುಹಮ್ಮದ್ ತನ್ನ ಜೀವನಕ್ಕಾಗಿ ಕುರಿಕಾಯುವ ಕೆಲಸಕ್ಕೆ ಸೇರಿಕೊಂಡನು. ಮೊದಲೇ ವಿಚಾರಪರಸ್ವಭಾವ, ಈ ಉದ್ಯೋಗವಂತು ಅದಕ್ಕೆ ಮತ್ತಷ್ಟು ಉತ್ತೇಜಕವಾಗಿ ಪರಿಣಮಿಸಿತು.

ಅರೇಬಿಯದಲ್ಲಿ ಈ ಸಮಯಕ್ಕೆ ಧರ್ಮವ್ಯವಸ್ಥೆಯಲ್ಲಿ ಮತ್ತು ರಾಜ್ಯವ್ಯವಸ್ಥೆಯಲ್ಲಿ ಶೈಥಿಲ್ಯವು, ಪ್ರತೀಕಾರವಿಲ್ಲದಂತೆ ಬೆಳೆದುಬಿಟ್ಟಿತ್ತು. ಅರಬರು ಅಜ್ಞಾನಿಗಳೂ, ಪರಸ್ಪರ ಕಲಹಾಸಕ್ತರೂ ಆಗಿದ್ದರು. ವಿಗ್ರಹ,

ನಕ್ಷತ್ರ, ಕಲ್ಲುಗಳ ಪೂಜೆಯು ತತ್ತ್ವಶೂನ್ಯ ಸಂಪ್ರದಾಯದಿಂದ ನಡೆಯುತ್ತಿತ್ತು. ಕಳ್ಳಕುಡಿತ, ಸೂಳೆಗಾರಿಕೆ, ಗುಲಾಮರ ಮೇಲೆ ದಬ್ಬಾಳಿಕೆ, ಹೆಣ್ಣು ಶಿಶುಗಳ ಹತ್ಯೆ ಇವುಗಳೆಲ್ಲ ಸಾಮಾನ್ಯವಾಗಿದ್ದುವು. ಇದನ್ನೆಲ್ಲ ಕಂಡ ಮುಹಮ್ಮದನ ಮನಸ್ಸು ದುಃಖದಿಂದ ಬೇಯುತೊಡಗಿತು; ಈ ಅಜ್ಞಾನದ ಕುರುಡುಗತ್ತಲನ್ನು ಭೇದಿಸಲು ಒಂದು ಬೆಳಕು ದೊರೆಯಲಾರದೇ ಎಂದು ಹಗಲಿರುಳು ಹಂಬಲಿಸಿತು. ಈ ಸಮಯದಲ್ಲೇ ಕುರಾಯಿಷ್ ಮತ್ತು ಬನೂಹ್‌ವಾಜಿನ್ ಪಂಗಡಗಳೊಳಗೆ ಪ್ರಾರಂಭವಾದ ಒಂದು ಯುದ್ಧದಲ್ಲಿ ಮುಹಮ್ಮದ್ ಭಾಗವಹಿಸಿ ವೀರಾವೇಶದಿಂದ ಕಾದಿದನು. ಇದರಿಂದ ಅವನು ತುಸು ಪ್ರಸಿದ್ಧಿಗೆ ಬಂದನು. ಇವನ ಸರಲತೆ, ಯೋಗ್ಯವಾದ ಚಾರಿತ್ರ್ಯ ಇವುಗಳನ್ನು ಕಂಡು ಜನರು ಇವನನ್ನು "ಅಲ್-ಅಮೀನ್" ಅಥವಾ "ವಿಶ್ವಾಸಪಾತ್ರ" ಎಂದು ಕರೆಯತೊಡಗಿದರು. ಆಗ ಅವನ ವಯಸ್ಸು ೨೦ ವರ್ಷ.

ಮುಹಮ್ಮದ್ ತಾನು ಕುರುಬನಾಗಿರುವುದನ್ನು ಮೆಚ್ಚಿಕೊಂಡಿದ್ದರೂ ಅವನ ಚಿಕ್ಕಪ್ಪನು ಅವನಿಗೆ ಬೇರೊಂದು ಒಳ್ಳೆಯ ಉದ್ಯೋಗವನ್ನು ದೊರಕಿಸಿಕೊಟ್ಟನು. "ಖದೀಜಾ" ಎಂಬ ಶ್ರೀಮಂತಳಾದ ವಿಧವೆಯ ಬಳಿಯಲ್ಲಿ ಅವನನ್ನು ನಿಲ್ಲಿಸಿದನು. ಆಕೆ ಅವನನ್ನು ಸಿರಿಯಾದಲ್ಲಿ ತನ್ನ ವ್ಯಾಪಾರದ ಪ್ರತಿನಿಧಿ (Agent)ಯನ್ನಾಗಿ ನೇಮಿಸಿಕೊಂಡಳು. ಮುಹಮ್ಮದನ ಪ್ರಾಮಾಣಿಕತೆ, ದಕ್ಷತೆಗಳನ್ನು ಕಂಡು ಖದೀಜಾ ತುಂಬ ಸಂತುಷ್ಟಳಾದಳು. ಅಲ್ಲದೆ ತಾನು ಸುಮಾರು ಐವತ್ತು ವರ್ಷಪ್ರಾಯದವಳಾದರೂ ಆ ಇಪ್ಪತ್ತಾರರ ತರುಣನನ್ನು ಮದುವೆಯಾಗಲು ಇಚ್ಛಿಸಿದಳು. ಮುಹಮ್ಮದನೂ ಸಂತೋಷದಿಂದ ಒಡಂಬಡಲು, ಅವರು ಸತಿ-ಪತಿಯರಾದರು. ಖದೀಜಾ ಇದರ ಮೊದಲು ಎರಡುಬಾರಿ ಮದುವೆಯಾಗಿ ವಿಧವೆಯಾಗಿದ್ದಳು. ಅದರಲ್ಲಿ ಆಕೆಗೆ ಕೆಲವು ಮಕ್ಕಳೂ ಇದ್ದರು.

ಮುಹಮ್ಮದ್ ವ್ಯಾಪಾರವಹಿವಾಟುಗಳನ್ನೆಲ್ಲ ತಾನೇ ವಹಿಸಿಕೊಂಡು ತನ್ನ ಸತಿಯೊಂದಿಗೆ ತೃಪ್ತಿಯಿಂದ ಜೀವನ ಸಾಗಿಸುತ್ತಿದ್ದನು. ಖದೀಜಾ ಮುಂದೆ ಹತ್ತು-ಹದಿನೈದು ವರ್ಷಗಳಲ್ಲಿ ತೀರಿಕೊಂಡಳು. ಆಗ ಅವರಿಗೆ ಕೆಲವು ಮಕ್ಕಳಾಗಿದ್ದುವು. ಅವರಲ್ಲಿ ಗಂಡು ಮಕ್ಕಳು ಯಾರೂ ಉಳಿಯಲಿಲ್ಲ. ಹೆಣ್ಣುಮಕ್ಕಳಲ್ಲಿ "ಫಾತಿಮಾ" ಎಂಬವಳು ತಂದೆತಾಯಿಂದಿರ

ಮುದ್ದಿನ ಮಗಳಾಗಿದ್ದಳು. ಮಹಮ್ಮದ್ ಕಾಲವಾಗುವ ಸಮಯಕ್ಕೆ ಈಕೆಯೊಬ್ಬಳೇ ಉಳಿದಿದ್ದಳು.

ತನ್ನ ಉದ್ಯೋಗದೊಂದಿಗೆ ಮಹಮ್ಮದ್ ಸಾಮಾಜಿಕ ಸುಧಾರಣೆಗಳ ಕಡೆಗೂ ಮನಸ್ಸು ಕೊಟ್ಟನು. ಎಷ್ಟೋ ಗುಲಾಮರನ್ನು ಸ್ವತಂತ್ರರನ್ನಾಗಿ ಮಾಡಿದನು. ಅನೇಕ ಮಂದಿ ಗುಲಾಮರೂ, ಅನಾಥರೂ, ವಿಧವೆಯರೂ ಅವನ ಔದಾರ್ಯದ ನೆರಳಿನಲ್ಲಿ ನೆಲೆಹಿಡಿದು ಬಾಳ್ವೆನಡೆಸುತ್ತಿದ್ದರು. ಒಮ್ಮೆ ಖದೀಜಾಗೆ ಅವಳ ಸಂಬಂಧಿಕಳೊಬ್ಬಳಿಂದ ಕೊಡುಗೆಯಾಗಿ ದೊರೆತ ಗುಲಾಮನೊಬ್ಬನನ್ನು ಮಹಮ್ಮದನಿಗೊಪ್ಪಿಸಿದಳು. ಮಹಮ್ಮದ್ ಅವನನ್ನು ಗುಲಾಮತನದಿಂದ ನಿವೃತ್ತಿಪಡಿಸಿದನು. ಆದರೆ "ಸಯುದ್" (ಗುಲಾಮ) ಮಹಮ್ಮದನನ್ನು ಬಿಟ್ಟು ತೆರಳಲು ಮನವಿಲ್ಲದೆ ಅವನ ಸೇವಕನಾಗಿ ಅಲ್ಲೇ ಉಳಿದನು. ಮಹಮ್ಮದ್ ಅವನನ್ನು ತನ್ನ ಮಗನಂತೆ ನೋಡಿಕೊಳ್ಳುತ್ತಿದ್ದನು.

ಲೋಕನಾಯಕನಾದರು

ಮಹಮ್ಮದರು ಹೀಗೆ ಪ್ರಪಂಚ ವ್ಯವಹಾರದಲ್ಲಿ ನಿರತರಾಗಿದ್ದರೂ ಅವರ ಅಂತರಂಗವು ಸತ್ಯದ ಬೆಳಕಿಗಾಗಿ ಹಂತಪಿಸುತ್ತಲೇ ಇತ್ತು. ಸಮಾಜದಲ್ಲಿ ಜನರ ಅನಾಚಾರಗಳು ಹೆಚ್ಚಿದಾಗ ಮಹಮ್ಮದರು ಊರಲ್ಲಿ ನಿಲ್ಲಲಾರದೆ ಮಕ್ಕಾದಿಂದ ಹೊರಗಿರುವ ಹೀರಾಪರ್ವತದ ಗುಹೆಗೆ ಹೋಗಿ ಧ್ಯಾನಮಗ್ನರಾಗುತ್ತಿದ್ದರು. ಅವರ ಆತ್ಮವು ದನಿಗೊಡುತ್ತಿತ್ತು"—ಏಳು, ಮೇಲಕ್ಕೇಳು. ಸೃಷ್ಟಿಯು, ಬದುಕು—ಸಾವುಗಳು ಒಳಿತು-ಕೆಡುಕುಗಳ ರಹಸ್ಯವನ್ನು ಭೇದಿಸು. ಜಗತ್ತಿನ ಜಂಜಾಟದ ಹೊರಗಿನ ಆಜ್ಞೆಯನ್ನು ಪಡೆಯಲೆತ್ನಿಸು". ಹೀಗೆ ಏಕಾಂತದಲ್ಲಿ ಕುಳಿತು ಧ್ಯಾನಿಸುವುದು ಅವರಿಗೊಂದು ಅಭ್ಯಾಸವಾಗಿ ಬಂದಿತು. ಅವರು ಪ್ರತಿವರ್ಷವೂ ರಮ್‌ಜಾನ್ ತಿಂಗಳನ್ನು ಆ ಗುಹೆಯಲ್ಲಿ ಕಳೆದುಬರುತ್ತಿದ್ದರು. ಹೀಗೆ ನಾಲ್ವತ್ತು ವರ್ಷ ವಯಸ್ಸನ್ನು ತಲಪುವವರೆಗೂ ಈ ತಪಸ್ಸು ನಡೆದುಬಂತು. ಅಷ್ಟರಲ್ಲೇ ಅವರಿಗೆ ದಿವ್ಯವಾದ ಆಹ್ವಾನವು ಕೇಳಿಸಿತು. ಪ್ರೊ. ಮ್ಯಾಕ್ಸ್‌ಮುಲ್ಲರ್ ಒಂದು ಕಡೆ ಹೀಗೆ ಬರೆಯುತ್ತಾರೆ: "ಸತ್ಯದ ಒಡೆಯನು ತನ್ನ ದೂತರನ್ನು ತಾನೇ ಆರಿಸಿಕೊಳ್ಳುತ್ತಾನೆ. ಗುಡುಗಿನ ಸದ್ದಿಗಿಂತಲೂ ಗಂಭೀರವಾದ ಸ್ವರದಲ್ಲಿ ಅವರೊಡನೆ ಮಾತಾಡುತ್ತಾನೆ."

ಒಂದು ರಾತ್ರಿ, ಗುಹೆಯ ಗಭೀರ ಏಕಾಂತತೆಯಲ್ಲಿ, ಮುಹಮ್ಮದರು ಧ್ಯಾನವೂ ಅಲ್ಲದ ಸ್ವಪ್ನವೂ ಅಲ್ಲದ ಅವಸ್ಥೆಯಲ್ಲಿದ್ದಾಗ ಒಂದು ಬಲಿಷ್ಠವಾದ ಧ್ವನಿ ಕೇಳಿಸಿತು: "ಹೊರಗೆ ನಡೆ, ಧರ್ಮೋಪದೇಶ ಮಾಡು!" (ಇಲ್ಲಿ ಕೆಲವು ಚರಿತ್ರಕಾರರು ಬೇರೊಂದು ರೀತಿಯಿಂದ ಹೇಳುತ್ತಾರೆ— "ಓದು" ಎಂಬ ಧ್ವನಿ ಕೇಳಿಸಿತು. ಮುಹಮ್ಮದ್ ಉತ್ತರಿಸಿದರು: "ನಾನೋದಲಾರೆ". ಧ್ವನಿ ಮರಳಿ ಹೇಳಿತು: "ಓದು." ಮುಹಮ್ಮದ್ ಹಾಗೇ ಉತ್ತರಿಸಿದರು: "ಓದಲಾರೆ." ಮೂರನೆಯ ಬಾರಿ ಧ್ವನಿಯು ತುಸು ಭಯಂಕರವಾಗಿ ಆಜ್ಞಾಪಿಸಿತು: "ಓದು." ಮುಹಮ್ಮದ್ ಹೇಳಿದರು: "ನಾನೇನನ್ನು ಓದಲಿ?"

"ಓದು, ಜಗತ್ತನ್ನು ನಿರ್ಮಿಸಿದ ನಿನ್ನೊಡೆಯನ ಹೆಸರಿನಲ್ಲಿ ಓದು. ಯಾವ ದೇವನು ಒಂದು ಮುದ್ದೆ ಮಣ್ಣಿನಿಂದ ಮನುಷ್ಯನನ್ನು ಸೃಷ್ಟಿಸಿದನೋ ಅವನ ಹೆಸರಿನಲ್ಲಿ ಓದು. ಅವನು ದೊಡ್ಡ ಉದಾರನು. ಲೇಖನಿಯ ಮೂಲಕ ಕಲಿಸಿದರೂ ಮಾನವನು ಅದನ್ನು ತಿಳಿದುಕೊಳ್ಳಲಿಲ್ಲ."

ಮುಹಮ್ಮದ್ ಎಚ್ಚತ್ತಾಗ ಆ ಮಾತುಗಳು ಹೃದಯದಲ್ಲಿ ಕೆತ್ತಿದಂತೆ ಉಳಿದುವು. ಮುಹಮ್ಮದ್ ಗುಹೆಯಿಂದ ಹೊರಗೆ ಬಂದರು. ಆದರೆ ಮರಳಿ ಅದೇ ಸ್ವರ ಕೇಳಿಸಿತು: "ಓದು ಮುಹಮ್ಮದನೇ! ನೀನು ಅಲ್ಲಾನ ದೂತನು." ಮುಹಮ್ಮದರು ಕಣ್ಣೆತ್ತಿ ನೋಡಿದರು. ಮನುಷ್ಯಾಕೃತಿಯ ದೇವದೂತನೊಬ್ಬನು ದಿಗಂತದ ಮೇಲೆ ಬಾನಿನಲ್ಲಿ ನಿಂತಿರುವುದನ್ನು ಕಂಡರು. ಮುಹಮ್ಮದ್ ಚಿಂತಿಸುತ್ತ ಅಲ್ಲಿಂದ ಮನೆಗೆ ಹೊರಟುಬಂದರು.) ಎರಡುಬಾರಿ ಕೇಳಿಸಿದ ವಾಣಿಯನ್ನೂ ಮುಹಮ್ಮದರು ಅರ್ಥಮಾಡಿಕೊಳ್ಳಲಿಲ್ಲ. ಮೂರನೆಯ ಬಾರಿ ಕೇಳಿಸಿದ ಧ್ವನಿ ಗುಹೆಯಲ್ಲಿ ಪ್ರತಿಧ್ವನಿಸಿ ಮುಹಮ್ಮದರ ಜಾಡ್ಯವನ್ನು ಹೊಡೆದಟ್ಟಲು, ಮುಹಮ್ಮದ್ ಕೇಳಿದರು: "ನಾನೇನು ಧರ್ಮವನ್ನುಪದೇಶಿಸಬೇಕು?"

"ನಿನ್ನೊಡೆಯನ ಹೆಸರಿನಲ್ಲಿ ಧರ್ಮವನ್ನು ಉಪದೇಶಿಸು" ಉತ್ತರಿಸಿತು ದಿವ್ಯವಾಣಿ. ಮುಹಮ್ಮದ್ ಸಮುಸ್ಯಾಶೃಂಖಲಿತರಾಗಿ ಹೊರಟು ಮನೆಗೆ ಬಂದರು. ಖದೀಜಾಳ ಎಚ್ಚರಿಕೆಯ ಮತ್ತು ಒಲುಮೆಯ ಆರೈಕೆಯಲ್ಲಿ ಕೆಲವು ದಿನಗಳನ್ನು ಮನೆಯಲ್ಲಿ ಕಳೆದರು. ಆದರೆ ಮತ್ತೊಮ್ಮೆ ಅವರು ಗುಹೆಗೆ ಹೋದಾಗ ದೇವದೂತನೊಬ್ಬನು ಬಂದು ಮಾನವ

ಜಾತಿಯ ಉದ್ಧಾರದ ಬಗೆಗೆ ಅವರ ಕರ್ತವ್ಯವನ್ನುಸುರಿ ತೆರಳಿದನು. ಮುಹಮ್ಮದರು ಪುನಃ ಮನೆಗೆ ಬಂದಮೇಲೆ ಖದೀಜಾ ಅವರ ಅನುಭವವನ್ನು ಅರ್ಥಮಾಡಿಕೊಳ್ಳುವುದಕ್ಕಾಗಿ ತನ್ನ ವೃದ್ಧ ಬಂಧುವೊಬ್ಬನೊಡನೆ ವಿಚಾರಿಸಿದಳು. ಅವನೂ ಮಕ್ಕಾದ ಆಗಿನ ಉಚ್ಛೃಂಖಲ ಆಚಾರಗಳಿಂದ ಬೇಸರ ಬಂದವನೇ. ಅದರಿಂದ ಬಿಡುಗಡೆ ಪಡೆಯಲು ಬಯಸಿದವನೇ. ಈ ವಿಚಾರವನ್ನು ಕೇಳಿದೊಡನೆ ಅರುಣೋದಯವನ್ನು ಕಂಡ ಕಮಲದಂತೆ ಅವನ ಹೃದಯವು ಆನಂದ ಪುಲಕಿತವಾಯಿತು. ಅವನು ಹೇಳಿದನು: "ಮಗು, ಪರಮಾತ್ಮನು ಹಿಂದೆ ತನ್ನ ದೂತನ ಮೂಲಕ ಮೋಸೆಸ್‌ಗೆ ಹೇಗೆ ಸಂದೇಶ ಕಳುಹಿಸಿರುವನೋ ಹಾಗೇ ನಮ್ಮ ಮುಹಮ್ಮದನಿಗೂ ಕಳುಹಿಸಿ ಕೊಟ್ಟಿರುವನು. ನಮ್ಮ ಮುಹಮ್ಮದ್ ದೇವದೂತನಾಗಿ ಆರಿಸಲ್ಪಟ್ಟಿದ್ದಾನೆ."

ಇದರಿಂದ ಖತೀಜಾಳ ಸಂತಸಕ್ಕೆ ಮೇರೆಯಿಲ್ಲದಾಯಿತು. ಅವಳು ಕೂಡಲೆ ಮುಹಮ್ಮದರ ಧರ್ಮವನ್ನು ಉಪದೇಶ ಪಡೆದು ಅವರ ಶಿಷ್ಯೆಯಾದಳು. ಅವಳ ಬಳಿಕ ಚಿಕ್ಕಪ್ಪನ ಮಗ ಆಲಿಯೂ, ಅನಂತರ ಸಾಕು ಮಗ ಸಯದನೂ, ಆ ಮೇಲೆ ಆಪ್ತಮಿತ್ರ ಅಬೂಬಕರ್ ಅವರ ಶಿಷ್ಯರಾದರು. ಮುಂದೆ ನಿಧಾನವಾಗಿ ಮುಹಮ್ಮದ್ ತನ್ನ ಮತವನ್ನು ತನ್ನ ಬಂಧುಗಳು, ಆಪ್ತಮಿತ್ರರು— ಇವರೊಳಗೆ ಪ್ರಚಾರಮಾಡಿದರು. ಕೆಲವರು ಅವರ ಮತವನ್ನಂಗೀಕರಿಸಿದರೂ, ಹೆಚ್ಚಿನ ಕುರಾಯಿಷ (ಬನೀಹಾಷಿಮೀ ಮೊದಲಾದ ಕೆಲವು ಪಂಗಡಗಳ ಒಂದು ಗುಂಪಿಗೆ ಈ ಹೆಸರು)ರೆಲ್ಲ ಅವರಿಗೂ ಒಬ್ಬ ಹುಚ್ಚನಿಗೂ ವ್ಯತ್ಯಾಸವೇನೆಂಬುದನ್ನೇ ಕಾಣಲಾರದೆ ಹೋದರು. ಇದರಿಂದ ಮುಹಮ್ಮದ್ ತನ್ನ ದಿವ್ಯಾನುಭವದ ಬಗೆಗೆ ಸಂಶಯ ಪಡತೊಡಗಿದರು. ಆದರೆ, ಮತ್ತೆ ಕೇಳಿಸಿತು ಆ ದಿವ್ಯವಾಣಿ: "ಏಳು, ಮುಸುಕನ್ನು ಕಿತ್ತೆಸೆದು ಏಳು, ಎಚ್ಚರಾಗು." ಮುಹಮ್ಮದ್ ಇದನ್ನು ಕೇಳಿ ಅದ್ಭುತ ಉತ್ಸಾಹದಿಂದ ತಾನು ಯಾವ ಕಾರ್ಯಕ್ಕೆ ಆದಿಷ್ಟನಾಗಿದ್ದನೋ ಅದನ್ನು ಮುಂದುವರಿಸಿದರು. ಬಹಿರಂಗವಾಗಿ ಮೂರ್ತಿಪೂಜೆಯನ್ನು ಮತ್ತು ದುರ್ಮಾರ್ಗಗಾಮಿತ್ವವನ್ನು ಖಂಡಿಸತೊಡಗಿದರು. ದೇವರ ಕಡೆಗೆ ಮತ್ತು ಒಳಿತಿನ ಬಾಳ್ವೆಯ ಕಡೆಗೆ ಬರಲು ಕರೆಯಿತ್ತರು.

ಕಾಬಾ ಅರೇಬಿಯದ ಜನರಿಗೆಲ್ಲ ತೀರ್ಥಕ್ಷೇತ್ರ. ಹಾಗೇ ವ್ಯಾಪಾರ ಕೇಂದ್ರವೂ ಆಗಿತ್ತು. ಅಲ್ಲಿಗೆ ಬರುವ ಯಾತ್ರಿಕರಿಂದಾಗಿ ಮಕ್ಕಾ ಪಟ್ಟಣಕ್ಕೆ

ಹೇರಳ ಲಾಭ ಬರುತ್ತಿತ್ತು. ಮುಹಮ್ಮದರ ಉಪದೇಶಗಳಿಂದ ಜನರು ಈ ಕುರುಡು ನಂಬಿಕೆಯ ಹಾದಿಯನ್ನು ಬಿಡಬಹುದೆಂದೂ, ಹಾಗೆ ಬಿಟ್ಟುಬಿಟ್ಟರೆ ತಮಗೆ ಬರುವ ಲಾಭಕ್ಕೆ ಸಂಚಕಾರ ಬರುವುದೆಂದೂ ಆಲೋಚಿಸಿ ಕಾಬಾದ ರಕ್ಷಕರಾದ ಕುರಾಯಿಷರೆಲ್ಲ ಮುಹಮ್ಮದರನ್ನು ಬಲವಾಗಿ ಪ್ರತಿಭಟಿಸಿದರು. ಅವನೊಬ್ಬ ಹತ್ತಕ್ಕೆ ಹತ್ತು ಪಾಲು ಹುಚ್ಚನೆಂದು ಸಾರತೊಡಗಿದರು. ಆದರೆ ಅವರ ಕುಲ (ಬನೀಹಾಷಿಮ್)ದ ಮೇಲಿನ ಗೌರವದಿಂದ ಅವರು ರಕ್ತ ಚೆಲ್ಲಲು ಹಿಂಜರಿದರು. ಅದಕ್ಕಾಗಿ ಅವರನ್ನು ಧನಪ್ರಲೋಭನದಿಂದ ಒಲಿಸಿಕೊಳ್ಳಲು ನೋಡಿದರು. ಆಗ ಬನೀಹಾಷಿಮ್ ಪಂಗಡಕ್ಕೆ ಯಜಮಾನನಾಗಿದ್ದ ಅಬೂತಾಲಿಬ (ಮುಹಮ್ಮದರ ಚಿಕ್ಕಪ್ಪ)ನ ಮೂಲಕ ದಾನೋಪಾಯವನ್ನು ಪ್ರಯೋಗಿಸಿ ನೋಡಿದರು. ಮುಹಮ್ಮದರು ಹೇಳಿದರು: "ಚಿಕ್ಕಪ್ಪಾ! ಅವರು ಬೇಕಾದರೆ ನನ್ನ ಒಂದು ಕೈಯಲ್ಲಿ ಸೂರ್ಯನನ್ನೂ, ಇನ್ನೊಂದು ಕೈಯಲ್ಲಿ ಚಂದ್ರನನ್ನೂ ತಂದಿರಿಸಲಿ, ಆದರೆ ನಾನು ನನ್ನ ಕರ್ತವ್ಯಕ್ಕೆ ಬೆನ್ನುತೋರಿಸಲಾರೆ. ಭಗವಂತನು ತನ್ನ ವಿಜಯಕ್ಕಾಗಿ ಎಲ್ಲಿಯ ವರೆಗೆ ನನ್ನನ್ನು ಹೊತ್ತಿರುತ್ತಾನೋ ಅಥವಾ ಎಲ್ಲಿಯ ವರೆಗೆ ನನ್ನ ಉಸಿರು ಆಡುತ್ತಿರುವುದೋ ಅಲ್ಲಿಯ ವರೆಗೆ ನಾನಿದರಿಂದ ವಿಶ್ರಾಂತಿ ಪಡೆಯಲಾರೆ."

ವಿರೋಧಿಗಳು ಈಗ ಭೇದೋಪಾಯಕ್ಕೆ ಶರಣಾಗಬೇಕಾಯಿತು. ಅವರು ವಿಧವಿಧದಿಂದ ಮುಹಮ್ಮದರನ್ನು ಕರ್ತವ್ಯವಿಮುಖನಾಗುವಂತೆ ಮಾಡಲು ಪ್ರಯತ್ನಿಸಿದರೂ ಮುಹಮ್ಮದರ ಹೆಜ್ಜೆಗಳು ಇನ್ನಷ್ಟು ದೃಢತೆಯನ್ನೇ ಪಡೆದುವು. ಆದರೆ ಅನುಯಾಯಿಗಳಲ್ಲಿ ಕೆಲವರು ಅವರ ಉಪಟಳದಿಂದ ಕಂಗೆಟ್ಟರು.

ಅಬಿಸೀನಿಯಾ ಆಗ ಕ್ರಿಶ್ಚನರ ಆಡಳಿತೆಗೊಳಪಟ್ಟಿತ್ತು. ಅಲ್ಲಿ ಮುಹಮ್ಮದರ ವಿರೋಧಿಗಳ ಪ್ರಭಾವ ನಡೆಯುವಂತಿರಲಿಲ್ಲ. ಮುಹಮ್ಮದರು ಹಿಂಸೆಯಿಂದ ಕಂಗೆಟ್ಟ ತನ್ನ ಅನುಯಾಯಿಗಳನ್ನು ಅಲ್ಲಿಗೆ ಕಳುಹಿಸಿಕೊಟ್ಟರು. ತಾನು ಮಾತ್ರ ಅಚಲ ನಿರ್ಧಾರದಿಂದ ಕರ್ತವ್ಯಕ್ಕೆ ಬಲವಾಗಿ ಅಂಟಿಕೊಂಡಿದ್ದರು. ಇದಾಗಿ ಒಂದು ವರ್ಷದಲ್ಲೇ ಖದೀಜಾ ದಿವಂಗತಳಾದಳು. ಅವಳ ಬೆನ್ನಿಗೇ ಚಿಕ್ಕಪ್ಪನೂ ಕಣ್ಣುಮುಚ್ಚಿಕೊಂಡನು. ಇದರಿಂದ ಮುಹಮ್ಮದರ ದುಃಖ ಇನ್ನೂ ಹೆಚ್ಚಿತು. ಖದೀಜಾ ತೀರಿಕೊಂಡು

ಮೂರು ವರ್ಷ ಕಳೆಯುವುದರೊಳಗೆ ಮುಹಮ್ಮದರು ಅಬೂಬಕರನ ಮಗಳು "ಆಯಿಷ"ಳನ್ನು ವಿವಾಹವಾದರು. (ಖದೀಜಾಳ ಮರಣಾನಂತರ ಮುಹಮ್ಮದರು ೧೧—೧೨ ವಿಧವೆಯರನ್ನು ಮದುವೆಯಾದರೆಂದೂ, ಆಯಿಷೆ ಯೊಬ್ಬಳೇ ಕನ್ಯೆಯೆಂದೂ ಕೆಲವು ಚಾರಿತ್ರಿಕರ ಅಭಿಪ್ರಾಯ. ಇದನ್ನು ಕೆಲವರೊಪ್ಪದೆ ಆಯಿಷೆಯನ್ನು ಮಾತ್ರ ವಿವಾಹವಾದುದಾಗಿಯೂ, ವಿಧವೆ ಯರು ಕೇವಲ ಅವರ ಆಶ್ರಯದಲ್ಲಿ ಇದ್ದುದಾಗಿಯೂ ಹೇಳುತ್ತಾರೆ.)

ಅಬೂತಾಲಿಬನ ಮರಣದ ಬಳಿಕ ಕುರಾಯಿಷರ ಕ್ರೌರ್ಯ ಹೆಚ್ಚಿತು. ಅಲ್ಲಿಯ ವರೆಗೆ ಅಬೂತಾಲಿಬನಿಗಾಗಿ ಹಿಂಜರಿದುಕೊಂಡಿದ್ದ ಅವರು ಈಗ ಭೀಷಣ ಅತ್ಯಾಚಾರಗಳನ್ನು ತಡೆಯಿಲ್ಲದೆ ಮುಂದುವರಿಸುವಂತಾಯಿತು. ಅಸಹ್ಯ ಹಿಂಸೆಗಳಿಂದ ಮುಹಮ್ಮದರನ್ನು ಹತ್ತಿಕ್ಕಲು ಪ್ರಯತ್ನಿಸತೊಡಗಿ ದರು. ಆದರೂ ಮುಹಮ್ಮದರು ಕೆಚ್ಚು ಬಿಡದೆ ಮಕ್ಕಾ ಯಾತ್ರಿಕರೊಳಗೆ ತನ್ನ ಮತವನ್ನು ಹರಡುತ್ತಿದ್ದರು. ಇದರಿಂದ ಸಾಕಷ್ಟು ಜಯವನ್ನು ಸಂಪಾದಿಸಿದರು. ಯಾತ್ರಿಬ್ ಎಂಬ ಪಕ್ಕದ ಒಂದು ಪಟ್ಟಣದಿಂದ ಬಂದಿದ್ದ ಕೆಲವು ಯಾತ್ರಿಕರು ಮುಹಮ್ಮದರ ಮತವನ್ನು ಸ್ವೀಕರಿಸಿ ಒಬ್ಬ ಮತ ಬೋಧಕನೊಂದಿಗೆ ತಮ್ಮ ಪಟ್ಟಣಕ್ಕೆ ಹಿಂದಿರುಗಿದರು. ಆದರೆ ಒಂದು ವರ್ಷದೊಳಗೆ ಎಪ್ಪತ್ತಮೂರು ಮಂದಿ ಮುಸ್ಲಿಮರು ಯಾತ್ರಿಬಿನಿಂದ ಬಂದು ಮುಹಮ್ಮದರನ್ನು ತಮ್ಮ ಪಟ್ಟಣಕ್ಕೆ ಆಮಂತ್ರಿಸಿದರು. ಮುಹಮ್ಮ ದರು ತಮ್ಮ ಮಕ್ಕಾದ ಅನುಯಾಯಿಗಳೊಂದಿಗೆ ಯಾತ್ರಿಬಿಗೆ ಬರುವು ದಾಗಿ ಮಾತು ಕೊಟ್ಟರು. ಅವರು ಸಂತೋಷದಿಂದ ಹೊರಟುಹೋದರು.

ಈ ವಿಷಯವು ಕುರಾಯಿಷರಿಗೆ ತಿಳಿದುಬಿಟ್ಟಿತು. ಅವರು ಪ್ರತಿ ಯೊಂದು ಪಂಗಡದಿಂದಲೂ ಒಬ್ಬೊಬ್ಬನಂತೆ ನಾಲ್ವತ್ತು ಮಂದಿ ಸೇರಿ ಗುಟ್ಟಾಗಿ ಮುಹಮ್ಮದರ ಕೊಲೆಮಾಡುವುದಾಗಿ ನಿಶ್ಚಯಿಸಿದರು. ಆದರೆ ಒಂದು ರಾತ್ರಿ, ಅವರು ಕೊಲೆಗೆ ಬರುವ ಮೊದಲೇ ಮುಹಮ್ಮದರು ಅಬೂ ಬಕರನೊಂದಿಗೆ ಮಕ್ಕಾವನ್ನು ತೊರೆದರು. ಅಲ್ಲಿಂದ ನೇರ ೨೦೦ ಮೈಲು ಗಳಷ್ಟು ದೂರದಲ್ಲಿರುವ ಯಾತ್ರಿಬ್‌ಗೆ ಮರಳುಗಾಡಿನಲ್ಲೇ ನಡೆದುಕೊಂಡು ಜುಲಾಯಿ ೨—೬೨೨ಕ್ಕೆ ಬಂದು ತಲಪಿದರು. ಈ ಘಟನೆಯನ್ನು "ಹಿಜ್ರಾ" ಎಂದು ಕರೆಯುತ್ತಾರೆ. ಇದೇ "ಹಿಜರಿ" ಎಂಬ ಮುಸ್ಲಿಂ ಶಕವಾಗಿ ಪರಿಗಣಿಸಲ್ಪಟ್ಟಿದೆ.

ಈ ಯಾತ್ರೆಯೇ ಮುಂದೆ "ಮೆದೀನತ್-ಉಲ್-ನಬಿ" ಎಂಬುದರ ಹ್ರಸ್ವರೂಪವಾದ "ಮದೀನ" ಎಂಬ ಹೆಸರಿನಿಂದ ಕರೆಯಲ್ಪಟ್ಟಿದೆ. "ಮೆದೀನತ್-ಉಲ್-ನಬಿ" ಎಂದರೆ "ಪ್ರವಾದಿಯ ಪಟ್ಟಣ"ವೆಂದರ್ಥ.

ಮದೀನಕ್ಕೆ ಬಂದ ಮೇಲೆ ಮುಹಮ್ಮದರ ಪ್ರಚಾರಕಾರ್ಯವು ಭರದಿಂದ ಸಾಗತೊಡಗಿತು. ಅಲ್ಲಿ ಅದಕ್ಕೆ ತಡೆಯೇನಿರಲಿಲ್ಲ. ಆದರೆ ಕುರಾಯಿಷರು ಮದೀನಕ್ಕೂ ಬಂದು ಅವರನ್ನು ಪೀಡಿಸತೊಡಗಿದರು. ಆದರೆ ಅಷ್ಟರಲ್ಲೇ ಮುಹಮ್ಮದರ ಪರಿವಾರ ಅದ್ಭುತವಾಗಿ ಬೆಳೆದುಬಿಟ್ಟಿದ್ದರಿಂದ ಕುರಾಯಿಷರ ಪ್ರತಾಪವು ಹೆಚ್ಚು ನಡೆಯಲವಕಾಶವಾಗಲಿಲ್ಲ. ಮುಂದೆ ಕೆಲವೇ ವರ್ಷಗಳಲ್ಲಿ ಎಂದರೆ ಕ್ರಿ. ಶ. ೬೩೦ರಲ್ಲಿ ಮುಹಮ್ಮದರು ಸೈನ್ಯವನ್ನು ತೆಗೆದುಕೊಂಡು ಮಕ್ಕಾದ ಮೇಲೆ ಹಾಯಲು ಕುರಾಯಿಷರು ಸೋತುಹೋದರು. ಮಕ್ಕಾದಲ್ಲಿ ಮುಹಮ್ಮದರ ರಾಜ್ಯ ಸ್ಥಾಪಿತವಾಯಿತು.

ಮುಹಮ್ಮದ ಪೈಗಂಬರರು ಯುದ್ಧಹೂಡಿದರೂ, ವಿಜಯ ಸಂಪಾದಿಸಿದರೂ ಕ್ರೂರತೆಯಿಂದ ವರ್ತಿಸಲಿಲ್ಲ. ಸೆರೆಸಿಕ್ಕಿದವರನ್ನೆಲ್ಲ ಬಿಟ್ಟುಬಿಟ್ಟರು. ಇದರಿಂದ ಅವರೆಲ್ಲ ಮುಹಮ್ಮದರಿಗೆ ಇನ್ನೊಮ್ಮೆ ಸೋತರು; ಮುಹಮ್ಮದರ ಮತವನ್ನು ಅಂಗೀಕರಿಸಿದರು. ಆಗ ಕಾಬಾ ದೇವಾಲಯದಲ್ಲಿದ್ದ ೩೬೦ ವಿಗ್ರಹಗಳನ್ನು ಮುಹಮ್ಮದ ಪೈಗಂಬರರು ಕಿತ್ತೊಗೆದರು. "ಸತ್ಯವು ಬಂತು, ಕತ್ತಲು ಅದೃಶ್ಯವಾಯಿತು." ಮುಸ್ಲಿಮರನ್ನೆಲ್ಲ ಪ್ರಾರ್ಥನೆಗೆ ಕರೆದರು. ಅವರಿಂದ ಸತ್ಯ, ನ್ಯಾಯ, ಧರ್ಮಗಳ ಪ್ರತಿಜ್ಞೆಯನ್ನು ಮಾಡಿಸಿದರು.

ಇಸ್ಲಾಂ ಮುಂದೆ ಅರೇಬಿಯದಲ್ಲೆಲ್ಲ ಬಹಳ ಶೀಘ್ರವಾಗಿ ಹಬ್ಬಿಕೊಂಡಿತು. ಇದರಿಂದಾಗಿ ಅರೇಬಿಯದಲ್ಲಿ ಲೌಕಿಕ-ಧಾರ್ಮಿಕಗಳೆರಡರಲ್ಲೂ ಮುಹಮ್ಮದರೇ ಸರ್ವಾಧಿಕಾರಿಯಾಗುವಂತಾಯಿತು. ಮುಹಮ್ಮದ ಪೈಗಂಬರರು, ಕ್ರಿ. ಶ. ೬೩೧-೩೨ರ ಸುಮಾರಿಗೆ ಪ್ರಪಂಚವನ್ನು ಬಿಟ್ಟರು. ಆಗ ಅವರ ವಯಸ್ಸು ೬೩.

ಪ್ರತಿ ವಾರವೂ ಕೊಂಡುಕೊಳ್ಳಿರಿ!

"ಒಂದಾಣೆ ಮಾಲೆ"ಯ ಪುಸ್ತಕಗಳು, ಪ್ರತಿ ವಾರ ಪ್ರಕಟವಾಗುತ್ತಿವೆ. ಹೊಸ ಹೊಸ ವಿಷಯಗಳ ಮೇಲೆ ಪುಸ್ತಕಗಳು ಹೊರಡುತ್ತಿವೆ. 1954ನೇ ಸಪ್ಟಂಬರದಿಂದ 1959ನೇ ಎಪ್ರಿಲ್ ತಿಂಗಳ ಎರಡನೆಯ ವಾರದ ವರೆಗೆ 229 ಪುಸ್ತಕಗಳು ಪ್ರಕಟವಾಗಿದ್ದು, ಇನ್ನೂ ಪ್ರತಿ ವಾರ ಒಂದೊಂದು ಹೊಸ ಪುಸ್ತಕವು ಹೊರಡುತ್ತಲೇ ಇದೆ.

229 ಆಣೆಗಳಿಗೆ 'ಒಂದಾಣೆ ಮಾಲೆ'ಯು, ಹೊದಿಕೆ ಕೂಡಿ, ಒಟ್ಟು 4506 ಪುಟಗಳನ್ನು ಕೊಟ್ಟಿರುತ್ತದೆ. ಇಷ್ಟು ಮೊಬಲಗಿಗೆ ಇಷ್ಟು ಪುಟಗಳನ್ನು ಬೇರೆ ಎಲ್ಲಿಯೂ ಯಾವ ಪ್ರಕಟಣೆಯೂ ಕೊಟ್ಟಿಲ್ಲ.

ವಿದ್ವಾಂಸರು ಮಾತ್ರ 'ಒಂದಾಣೆ ಮಾಲೆ'ಗೆ ಬರೆಯುತ್ತಾರೆ. 'ಅಶ್ಲೀಲ' ಎಂಬ ಅಂಶವೇ 'ಒಂದಾಣೆ ಮಾಲೆ'ಯ ಪ್ರಕಟಣೆಗಳಲ್ಲಿರುವುದಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳು ಚಿಕ್ಕ ವಿದ್ಯಾರ್ಥಿಗಳಿಂದ ವಯೋವೃದ್ಧರ ವರೆಗೆ, ಪ್ರತಿಯೊಬ್ಬನಿಗೂ ಅವಶ್ಯ ಇವೆ. ಇಷ್ಟು ಸುಲಭ ಬೆಲೆಯಲ್ಲಿ ಇಷ್ಟು ಉತ್ತಮ ಸಾಹಿತ್ಯವು, ಈ ಮೊದಲು ಎಲ್ಲಿಯೂ ಒದಗಿಸಲ್ಪಟ್ಟಿಲ್ಲ.

'ಒಂದಾಣೆ ಮಾಲೆ' ಪುಸ್ತಕಗಳನ್ನು ಟಪ್ಪಾಲು ದ್ವಾರಾ ತರಿಸಿಕೊಳ್ಳುವವರು ರೂ. 4—8—0ನ್ನು ಮನಿಯಾರ್ಡರ್ ಮೂಲಕ ಕಳಿಸತಕ್ಕದ್ದು. ಡಿಪಾಜಿಟ್ ಇಡುವವರು ಮಾತ್ರ ಏಜನ್ಸಿಗಾಗಿ ಬರೆದುಕೊಳ್ಳತಕ್ಕದ್ದು.

ವಾರಕ್ಕೆ ಕೇವಲ ಒಂದಾಣೆ ವ್ಯಯದಿಂದ ಒಂದು ಉತ್ಕೃಷ್ಟ—ಉಪಯುಕ್ತ ಪುಸ್ತಕವನ್ನು ಹೊಂದುವ ಈ ಯೋಜನೆಯ ಸದುಪಯೋಗ ಮಾಡಿಕೊಳ್ಳಿರಿ.

ಒಂದಾಣೆ ಮಾಲೆ, ಪ್ರಭಾತ ಆಫೀಸು, ರಥಬೀದಿ,
ಮಂಗಳೂರು-1.

ANNA PUBLICATIONS, CAR STREET, MANGALORE-1.

Edited, Printed & Published by K. V. Shenoy
at The Prabhat Printers, Ltd., Mangalore.